**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ, ಇವರ ಶೂನ್ಯ ವೇಳೆ ಪ್ರಸ್ತಾವನೆಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ:-**

**ವಿಷಯ: "ದಿನಾಂಕ:11.12.2023ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತೇನೆ.**

- **ಸವದತ್ತಿ ತಾಲ್ಲೂಕಿನಲ್ಲೇ ಎರಡನೇ ಅತಿ ದೊಡ್ಡ ಗ್ರಾಮವಾದ ಮುರಗೋಡದಲ್ಲಿ ಪುಟ್ಟ ಮಕ್ಕಳಿಗೆ ಕಲಿಯಲು ಸೂಕ್ತ ಅಂಗನವಾಡಿ ಕೇಂದ್ರ ಇಲ್ಲ. ಸರ್ಕಾರಿ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದು, ಬೀಡಾ ಅಂಗಡಿಯಲ್ಲಿ ಮಕ್ಕಳಿಗೆ ಶಾಲೆ ನಡೆಸಲಾಗುತ್ತಿದೆ.**
- **ಗ್ರಾಮದ ಹೊರಟ್ಟಿ ಓಣಿಯ ನಾಗರಭಾವಿ ರಸ್ತೆಯಲ್ಲಿರುವ ನಂ-03 ಅಂಗನವಾಡಿ ಕಟ್ಟಡ ಶಿಥಿಲಗೊಂಡ ಹಿನ್ನೆಲೆಯಲ್ಲಿ ಮಕ್ಕಳ ಹಿತದೃಷ್ಟಿಯಿಂದ ಬಾಡಿಗೆ ರೂಪದಲ್ಲಿ ಶಾಲೆ ನಡೆಸುತ್ತಿದ್ದು, ಅದು ಪಾನ್ ಬೀಡಾ ಅಂಗಡಿ ಕಟ್ಟೆಗೆ ಡಬ್ಬಿಯಲ್ಲಿ ಒಂದು ವರ್ಷದಿಂದ ಮಕ್ಕಳಿಗೆ ಪಾಠ ಹೇಳಿಕೊಡಲಾಗುತ್ತಿದೆ. ಇಲ್ಲಿ ಮಕ್ಕಳು, ಶಿಕ್ಷಕಿಗೆ ಕುಳಿತುಕೊಳ್ಳಲೂ ಸ್ಥಳವಿಲ್ಲ.**
- **ಸ್ಥಳಾವಕಾಶ ಇಲ್ಲದೆ ಅಡುಗೆ ಮಾಡಲು ಆಗುತ್ತಿಲ್ಲ. ಅಲ್ಪ ಜಾಗದಲ್ಲಿಯೇ ಗ್ಯಾಸ್ ಸಿಲಿಂಡರ್, ತರಕಾರಿ, ರೇಷನ್ ಹಾಗೂ ಇನ್ನಿತರ ಸಾಮಗ್ರಿ ಇಟ್ಟುಕೊಳ್ಳಬೇಕಾಗಿದೆ. ಇಂತಹ ದಯನೀಯ ಸ್ಥಿತಿಯಲ್ಲಿರುವ ಅಂಗನವಾಡಿ ಮಕ್ಕಳನ್ನು ಕಳುಹಿಸಲು ಪಾಲಕರು ಹಿಂಜರಿಯುತ್ತಿದ್ದಾರೆ.**
- **ವರ್ಷ ಕಳೆದರೂ ಸಂಬಂಧಿಸಿದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸುಮ್ಮನೆ ಕುಂತಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ ಆದ್ದರಿಂದ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ."**

******

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ, 2ನೇ ಅಕ್ಟೋಬರ್ 1975 ರಂದು ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳೊಂದಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಲಾಗಿದೆ. 6 ವರ್ಷದ ಒಳಗಿನ ಮಕ್ಕಳ, ಗರ್ಭಿಣಿ, ಬಾಣಂತಿ ಮತ್ತು ಕಿಶೋರಿಯರ ಸರ್ವೋತೋಮುಖ ಅಭಿವೃದ್ಧಿಯು ಈ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ.

ಪ್ರಸ್ತುತ ರಾಜ್ಯದಲ್ಲಿ 67570 ಮುಖ್ಯ ಅಂಗನವಾಡಿ ಹಾಗೂ 2329 ಮಿನಿ ಅಂಗನವಾಡಿ ಕೇಂದ್ರಗಳನ್ನೊಳಗೊಂಡಂತೆ ಒಟ್ಟು 69899 ಅಂಗನವಾಡಿ ಕೇಂದ್ರಗಳಿವೆ. ಈ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳಗಳ ಮಾಹಿತಿ ಈ ಕೆಳಕಂಡಂತಿದೆ.

| | |
|---|---|
| ಸ್ವಂತ ಕಟ್ಟಡ | 46769 |
| ಪಂಚಾಯತ್ ಕಟ್ಟಡ | 1053 |
| ಸಮುದಾಯ ಭವನ | 2953 |
| ಶಾಲಾ ಆವರಣ | 4966 |
| ಪರ್ಯಾಯ ವ್ಯವಸ್ಥೆ | 1333 |
| ಬಾಡಿಗೆ ಕಟ್ಟಡ | 12720 |
| ಯುವಕ ಮಂಡಳ | 67 |
| ಮಹಿಳಾ ಮಂಡಳ | 38 |
| **ಒಟ್ಟು** | **69899** |

ಬೆಳಗಾವಿ ಜಿಲ್ಲೆಯಲ್ಲಿ 5656 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಕಾರ್ಯನಿರ್ವಹಿಸುತ್ತಿರುವ ಕಟ್ಟಡಗಳ ಮಾಹಿತಿ ಈ ಕೆಳಕಂಡಂತಿದೆ.

| | |
|---|---|
| ಸ್ವಂತ ಕಟ್ಟಡ | 3326 |
| ಪಂಚಾಯತ್ ಕಟ್ಟಡ | 96 |
| ಸಮುದಾಯ ಭವನ | 281 |
| ಶಾಲಾ ಆವರಣ | 397 |
| ಪರ್ಯಾಯ ವ್ಯವಸ್ಥೆ | 94 |
| ಬಾಡಿಗೆ ಕಟ್ಟಡ | 1452 |
| ಯುವಕ ಮಂಡಳ | 04 |
| ಮಹಿಳಾ ಮಂಡಳ | 06 |
| **ಒಟ್ಟು** | **5656** |

ಬೆಳಗಾವಿ ಜಿಲ್ಲೆಯ ಸವದತ್ತಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಒಟ್ಟು 370 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಕಟ್ಟಡಗಳ ಮಾಹಿತಿ ಈ ಕೆಳಕಂಡಂತಿದೆ.

| | |
|---|---|
| ಸ್ವಂತ ಕಟ್ಟಡ | 302 |
| ಪಂಚಾಯತ್ ಕಟ್ಟಡ | 02 |
| ಸಮುದಾಯ ಭವನ | 11 |
| ಶಾಲಾ ಆವರಣ | 11 |
| ಬಾಡಿಗೆ ಕಟ್ಟಡ | 21 |
| ಪರ್ಯಾಯ ವ್ಯವಸ್ಥೆ | 23 |
| **ಒಟ್ಟು** | **370** |

ಮುರಗೋಡ ಗ್ರಾಮದ ಹೊರಟ್ಟಿ ಓಣಿಯ ನಾಗರಬಾವಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರ ಸಂಖ್ಯೆ-03 ಸ್ವಂತ ಕಟ್ಟಡವಾಗಿದ್ದು, ಕಟ್ಟಡವು ಶಿಥಿಲಾವಸ್ಥೆಯಲ್ಲಿರುವ ಪ್ರಯುಕ್ತ ಹಾಗೂ ಸದರಿ ಹೊರಟ್ಟಿ ಓಣಿ ವ್ಯಾಪ್ತಿಯಲ್ಲಿನ ಅಂಗನವಾಡಿ ಕೇಂದ್ರದ ಹತ್ತಿರ ಯಾವುದೇ ಶಾಲೆ, ಸಮುದಾಯ ಭವನ ಹಾಗೂ ಇತರೆ ಸರ್ಕಾರಿ ಕಟ್ಟಡಗಳು ಲಭ್ಯವಿಲ್ಲದ್ದರಿಂದ ಬಾಲವಿಕಾಸ ಸಮಿತಿಯ ಸಭೆಯನ್ನು ನಡೆಸಿ ಸಮಿತಿ ಸದಸ್ಯರ ಒಪ್ಪಿಗೆಯ ಮೇರೆಗೆ ಖಾಲಿ ಇರುವ ಅಂಗಡಿ ಮತ್ತು ಅಂಗಡಿ ಹಿಂದಿನ ಮನೆಯಲ್ಲಿ ತಾತ್ಕಾಲಿಕವಾಗಿ ಕೇಂದ್ರವನ್ನು ನಡೆಸಲಾಗುತ್ತಿತ್ತು. ಪ್ರಸ್ತುತ ಸದರಿ ಕೇಂದ್ರವನ್ನು ಬೇರೆ ಸುಸಜ್ಜಿತ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ಶಿಥಿಲಗೊಂಡಿರುವ ಕಟ್ಟಡವು ಸಂಪೂರ್ಣವಾಗಿ ಹಾನಿಗೊಳಗಾಗಿದ್ದು, ದುರಸ್ತಿಗೊಳಿಸಲು ಸಹ ಸಾಧ್ಯವಾಗದೇ ಇರುವುದರಿಂದ ಸದರಿ ನಿವೇಶನದಲ್ಲಿಯೇ ಹೊಸ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಲಭ್ಯತೆ ಮೇರೆಗೆ ಕ್ರಮ ವಹಿಸಲಾಗುವುದು.

**ಸಂಖ್ಯೆ: ಮಮಇ 255 ಐಸಿಡಿ 2023**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು.